**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 534/2019
ಪಿಡಬ್ಲು :6 ಸಿಡಬ್ಲು :7

ಸಾಕ್ಷಿಯ ಹೆಸರು : ಶ್ರೀ. ಶಿವಾನಂದ ಮಾಳಿ
ತಂದೆಯ ಹೆಸರು : ಶ್ರೀ.ಬಸಪ್ಪ
ವಯಸ್ಸು : 38 ವರ್ಷ
ಉದ್ಯೋಗ : ಚಾಲಕ
ವಾಸ್ತವ್ಯ : ರಾಯಬಾಗ ರೇಲ್ವೆಸ್ಟೇಶನ ಹತ್ತಿರ
ದಿನಾಂಕ : 06-08-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 6 ಪ್ರಾಸಾಃ 5 ಮಹಾದೇವ ನಿಂಗನೂರೆ ನನಗೆ ಗೊತ್ತಿರುತ್ತಾರೆ. ಸುಮಾರು ಏಳೂವರೆ ವರ್ಷಗಳ ಹಿಂದೆ ಪೋಲಿಸರು ನನ್ನನ್ನು ಮತ್ತು ಚಾಸಾಃ 6 ಪ್ರಾಸಾಃ 5 ಮಹಾದೇವ ನಿಂಗನೂರೆ ಅವರನ್ನು ಪೋಲಿಸ ಠಾಣೆಗೆ ಕರೆಸಿದ್ದರು. ನಾವು ಠಾಣೆಗೆ ಹೋದಾಗ ಪೋಲಿಸರು ಮತ್ತು ವಿಠ್ಠಲ ಎನ್ನುವವರು ಇದ್ದರು. ಈಗ ಏಳೂವರೆ ವರ್ಷಗಳಾಗಿರುವುದರಿಂದ ಸದರಿ ವಿಠ್ಠಲ ಅವರನ್ನು ಗುರುತಿಸಲು ಆಗುವುದಿಲ್ಲ ಎಂದು ಹೇಳಿದ್ದಾರೆ.

2. ಪೋಲಿಸರು ನಮ್ಮನ್ನು ಪೋಲಿಸ ವಾಹನದಲ್ಲಿ ಮತ್ತು ಆರೋಪಿ ವಿಠ್ಠಲ ಅವರನ್ನು ರಾಯಬಾಗ ಸಕ್ಕರೆ ಕಾರ್ಖಾನೆ ಹತ್ತಿರ ಮುಂದೆ ಸಣ್ಣ ದಾರಿಯಲ್ಲಿ ಒಂದು ತೋಟಕ್ಕೆ ಕರೆದುಕೊಂಡು ಹೋದರು. ಆ ಜಾಗವನ್ನು ವಿಠ್ಠಲ ಎನ್ನುವವರು ತೋರಿಸಿದರು. ಆ ಸ್ಥಳದಲ್ಲಿ ಆಯುಧಗಳು ಇದ್ದವು, ಅಂದರೆ ಸೈಕಲಗೆ ಗಾಳಿ ಹಾಕುವ ಪಂಪ್, ಕುಡಗೋಲು ಮತ್ತು ಕುರುಪಿ ಇದ್ದವು. ಅವುಗಳನ್ನು ಗೊಂಜಾಳ ಚೀಲದ ಹತ್ತಿರ ಇಟ್ಟಿದ್ದು, ವಿಠ್ಠಲ

ಎನ್ನುವವರು ತೆಗೆದುಕೊಂಡು ಬಂದು ಪೋಲಿಸರಿಗೆ ನೀಡಿದರು. ಈಗ ಆ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

3. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಕುಡಗೋಲಿನ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಮತ್ತು ಕುಡಗೋಲನ್ನು ಗುರುತಿಸಿದ್ದಾರೆ. ಕುಡಗೋಲನ್ನು ಈಗಾಗಲೇ ಮು.ಮಾ.3 ಎಂದು ಗುರುತಿಸಲಾಗಿದೆ. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಸೈಕಲಗೆ ಗಾಳಿ ಹಾಕುವ ಪಂಪ್‌ನ್ನು ಗುರುತಿಸಿದ್ದಾರೆ. ಕುಡಗೋಲನ್ನು ಈಗಾಗಲೇ ಮು.ಮಾ.4 ಎಂದು ಗುರುತಿಸಲಾಗಿದೆ. ಪಂಚನಾಮೆಯನ್ನು ಈಗಾಗಲೇ ನಿಪಿ–5 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿ ತಮ್ಮ ಸಹಿಯನ್ನು ನಿಪಿ–5(ಡಿ) ಯಿಂದ ನಿಪಿ–5(ಎಫ್) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎಸ್.ಬಿ.ಪಿ ವಕೀಲರಿಂದ ಶ್ರೀ.ಬಿ.ಜೆ.ಜೆ ವಕೀಲರ</u>**

4. ಪಂಚನಾಮೆಗೆ ನಾನು ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎನ್ನುವುದು ಸರಿ. ಮು.ಮಾ.3 ಮತ್ತು ನಿಪಿ–4 ರಂತಹ ಕುಡಗೋಲು ಮತ್ತು ಸೈಕಲಗೆ ಗಾಳಿ ಹಾಕುವ ಪಂಪ್ ಸಾಮಾನ್ಯವಾಗಿ ಎಲ್ಲ ರೈತರ ಮನೆಗಳಲ್ಲಿ ಇರುತ್ತವೆ ಎನ್ನುವುದು ಸರಿ.

5. ಪಂಚನಾಮೆ ಬರೆಯಲು ಪೋಲಿಸರಿಗೆ ನಾನು ಮಾಹಿತಿ ನೀಡಿರುವುದಿಲ್ಲ. ನಿಪಿ–5 ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದು ಸೂಚಿಸುವುದು ಸರಿ.

6. ಪೋಲಿಸರು ನನ್ನ ಸಮಕ್ಷಮ ನಿಪಿ–5 ರಂತೆ ಪಂಚನಾಮೆ ಮಾಡಿಲ್ಲ, ಯಾವುದೇ ಆರೋಪಿತರು ನನ್ನ ಸಮಕ್ಷಮ ವಸ್ತುಗಳನ್ನು ಹಾಜರುಮಾಡಿಲ್ಲ ಎನ್ನುವುದು ಸರಿಯಲ್ಲ. ನಾನು ಚಾಸಾಃ 8 ಮುತ್ತಪ್ಪ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು

ಸರಿಯಲ್ಲ. ನಾನು ಇಂದು ನ್ಯಾಯಾಲಯಕ್ಕೆ ಚಾಸಾಃ 8 ಮುತ್ತಪ್ಪ ಅವರೊಂದಿಗೆ ಬಂದಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.